ಖಯಾಲಿ ಇದ್ದ ಹಲವು ಕಲಾಪುರುಷರನ್ನು ಒಟ್ಟಿಗೆ ನೋಡಿ ಮೇಷ್ಟ್ರಿಗೆ ಸಂತೋಷವಾಯಿತು.

'ಹತ್ತನ್ನೆರಡು ವರ್ಷಗಳ ಹಿಂದೆ ಪಾಳ್ಯದ ಮೂರ್ಕಣ್ಣಪ್ಪಾರು ಶನಿಮಹಾತ್ಮೆ ಆಡಿಸ್ತೀನಿ ಅಂತ ಹರಕೆ ಕಟ್ಟಿಕೊಂಡಿದ್ರಂತೆ. ನಾಟಕಕ್ಕೆ ಅಂತ ಊರವರಿಂದ ಪಟ್ಟಿ ಎತ್ತಿದ್ದರು. ಆ ದುಡ್ಡು, ಐವತ್ತು ಸಾವಿರ ಐತೆ. ಅದರ ಜತೆಗೆ ಇನ್ನೂ ಒಂದು ಲಕ್ಷ ರುಪಾಯಿ ಕೊಡ್ತೀವಿ ಅಂತ ಅವರ ಮಗ, ಅಳಿಯ ಮುಂದೆ ಬಂದವರೆ. ಊರವರೆಲ್ಲಾ ಸೇರಿ ಇನ್ನೂ ಎರಡು ಲಕ್ಷ ರುಪಾಯಿ ಎತ್ತಿ ಕೊಡ್ತೀವಿ. ನಿಮಗೆ ಐವತ್ತು ಸಾವಿರ ಸಂಭಾವನೆ ಕೊಟ್ಟು, ಸನ್ಮಾನಾನೂ ಮಾಡ್ತೀವಿ. ಒಟ್ನಲ್ಲಿ ಶನಿಮಹಾತ್ಮೆ ಆಡಿಸೋ ಜವಾಬ್ದಾರಿ ನಿಮ್ದು. ಅದನ್ನು ಹೇಳನ ಅಂತ ಕರೆಸಿದೆ...' ಅಂತ ಬಾಬಣ್ಣ ಸಂಕ್ಷಿಪ್ತವಾಗಿ ಹೇಳಿ ಮೇಷ್ಟ್ರ ಮುಖ ನೋಡಿದ.

'ನನ್ನ ಮಾತುಗಳನ್ನು ನೀವೆಲ್ಲ ತಾಳ್ಮೆಯಿಂದ ಕೇಳಿಸಿಕೊಳ್ಳಬೇಕು' ಅಂತ ನಾಟಕೀಯವಾಗಿ ಹೇಳುತ್ತ ಮೇಷ್ಟ್ರು ಎದ್ದು ನಿಂತರು. 'ಈ ಶನಿಮಹಾತ್ಮೆ ಇದೆಯಲ್ಲ, ಅದು ಉಳಿದ ನಾಟಕದಂಗಲ್ಲ. ಹಿಂದೆ ನಾನೇ ರಾಜಾ ಸತ್ಯವ್ರತ, ಶನಿಮಹಾತ್ಮೆ ಎರಡನ್ನೂ ಆಡಿಸಿದ್ದೆ. ಆಗ ಊರಿಗಿನ್ನೂ ಸಾರಾಯಿ ಬಂದಿರಲಿಲ್ಲ. ಮೂರ್ಕಣ್ಣಪ್ಪಾರು ಶನಿಮಹಾತ್ಮೆ ಆಡಿಸು ಅಮ್ತ ನಂಗೆ ಹೇಳಲಿಲ್ಲ. ಏನು ಕಾರಣವೊ? ನಾನು ಕುಡೀಬೌದು ಅಂಬೋ ಅನುಮಾನ ಅವರಿಗಿತ್ತು. ಚಿಕ್ಕುಲಿಕುಂಟೆ ಪುಟ್ಟಾಚಾರ್‍ರನ್ನು ಕರೆಸಿ ಪ್ರಾಕ್ಟೀಸು ಮಾಡಿಸಿದರು. ಅದೇನಾಯ್ತೊ, ನಾಟಕ ನಡೀಲಿಲ್ಲ. ಈಗ ಊರಲ್ಲಿ ಎರಡು ಲಿಕ್ಕರ್ ಅಂಗಡಿಗಳವೆ. ಹಗಲು ಹೊತ್ತಲ್ಲೇ ಕಾಪಿ ಕುಡ್ದಂಗೆ ಕುಡ್ದು ಬರೋರನ್ನು ನಾವೆಲ್ಲ ನೋಡ್ತ ಇದೀವಿ... ಪ್ರಾಕ್ಟೀಸು ಶುರು ಮಾಡಿದ ದಿನದಿಂದ ಮಂಗಳ ಪದ ಆಡಿ ಮುಗಿಸೋತನಕ ಕುಡಿಯಲ್ಲ ಅಮ್ತ ಎಲ್ಲ ಪಾತ್ರಧಾರಿಗಳೂ ಮಾತು ಕೊಟ್ಟರೆ ನಾಟಕ ಆಡಿಸ್ತೀನಿ...' ಅಂತ ಹೇಳುತ್ತ ಎಲ್ಲರ ಮುಖ ನೋಡಿದರು.

'ಏನ್ರಯ್ಯಾ ನಾಟಕ ಆಡಬೇಕು ಅಂತಿರೊ ಹುಡುಗರಾ, ಮೇಷ್ಟ್ರ ಮಾತಿಗೆ ಏನು ಹೇಳ್ತೀರಪ್ಪ...' ಅಂತ ಬಾಬಣ್ಣ ಕೇಳಿದ. ಹುಡುಗರೆಲ್ಲ ಕೈ ಎತ್ತಿ ಆಗಲಿ ಅಂತ ಶಾಲಾ ಮಕ್ಕಳಂತೆ ಒಟ್ಟಿಗೆ ಕೂಗಿ ಹೇಳಿದರು.

'ಸ್ವಾಮಿ, ಪಾತ್ರ ಮಾಡೋರು ಸಿಗದು ಕಷ್ಟ ಬಾಬಣ್ಣ, ರಾಣಿ ಮತ್ತು ಇನ್ನಿಬ್ಬರ ಪಾತ್ರಕ್ಕೆ ಹೊರಗಿನಿಂದ ಲೇಡಿ ಆರ್ಟಿಸ್ಟ್‌ಗಳನ್ನು ಕರೆಸಬೇಕು. ಶ್ರಾವಣ ಕಳೆದ ಮೇಲೆ ಪ್ರಾಕ್ಟೀಸು ಶುರುಮಾಡಿ, ದೀಪಾವಳಿ ಮುಗಿದ ಮೇಲೆ ನಾಟ್ಕ ಆಡಿಸ್ತೀನಿ...' ಅಂದರು.

***

ಶನಿ ದೇವರ ಪಾತ್ರ ಮಾಡೋನಿಗೆ ಚೂಪಾದ ಉದ್ದ ಮೂಗು, ದೊಡ್ಡ ಕಣ್ಣುಗಳು, ನೀಳಕಾಯ ಇರಬೇಕು. ಅಂಥವನು ನಮ್ಮ ಹೋಬಳಿಯಲ್ಲೇ ಇಲ್ಲ. ಹುಡುಕಿಕೊಂಡು ಹೋದರೆ ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ಸಿಗಬೌದು. ಸಿಕ್ಕರೂ ಸ್ವಾಮಿ ಪಾತ್ರ ಮಾಡೋಕೆ ಅವನು ಒಪ್ಪಬೇಕಲ್ಲ. ಆ ಮಾರಾಯನ ಸಾವಾಸ ಬೇಡ ಅಂತ ಹೇಳೋರನ್ನು ಮೇಷ್ಟ್ರು ನೋಡಿದ್ದರು. ತಮಗೆ ಪರಿಚಯವಿದ್ದ, ನಾಟಕದ ಗೆಳೆಯರಿಗೆಲ್ಲ ಫೋನ್ ಮಾಡಿ ಸ್ವಾಮಿ ಪಾತ್ರಕ್ಕೆ ಲಗತ್ತಾಗುವ ನಟನನ್ನು ಹುಡುಕಿಕೊಡಿ ಅಂತ ಕೇಳಿಕೊಂಡರು.

'ಮಹಾರಾಣಿ ಪಾತ್ರಕ್ಕೆ ಐಶ್ವರ್ಯ ಅಂತ ಒಬ್ಬಳಿದ್ದಾಳೆ. ಅವಳ ಹೆಸರು ಸೌಭಾಗ್ಯ. ಚಳ್ಳಕೆರೆ ಹತ್ರ ಯಾವುದೊ ಊರು. ಈಗ ದುರ್ಗದಲ್ಲಿದ್ದಾಳೆ. ಅವಳಪ್ಪ ರಸ್ತೆ ಕಂಟ್ರಾಕ್ಟರಂತೆ. ಒಂದೆರಡು ತೆಲುಗು ಸಿನಿಮಾಗಳಲ್ಲೂ ಪಾತ್ರ ಮಾಡಿದ್ದಾಳಂತೆ. ನಲವತ್ತು ವರ್ಷವಾದರೂ ನೋಡಕೆ ಮೂವತ್ತು ವರ್ಷ ಅಂತ ಹೇಳಬಹುದಾದ ಮಧ್ಯಮ ಗಾತ್ರದ ಸುಂದರ ಹೆಂಗಸು...' ಅಂತ ಮೇಷ್ಟ್ರ ಗೆಳೆಯನೊಬ್ಬ ಹೇಳಿ ಅವಳ ಫೋನ್ ನಂಬರ್ ಕೊಟ್ಟಿದ್ದ. ನೀನೇ ಫೋನ್ ಮಾಡಿ ಮಾತಾಡು ಅಂತಲೂ ಹೇಳಿದ್ದ. ಮೇಷ್ಟ್ರು ಐಶ್ವರ್ಯಗೆ ಫೋನು ಮಾಡಿ, ನಾಟಕದ ವಿಷಯ ಮಾತಾಡಬೇಕು ಯಾವತ್ತು ಬರಲಿ ಅಂತ ಕೇಳಿದರು.

'ನೇನು ನಾಟಕಮು ಸೇಸ್ತಾನನಿ ಮೀಕಿ ಎವರು ಚೆಪ್ಪಾರು ಸಾರು...' ಅಂತ ಐಶ್ವರ್ಯ ಕೇಳಿದಳು. ಮೇಷ್ಟ್ರು ತಮ್ಮ ಗೆಳೆಯನ ಹೆಸರು ಹೇಳುತ್ತಿದ್ದಂತೆ ಓ ಆಯನಾ ಅಂತ ರಾಗ ಎಳೆಯುತ್ತಾ ಮೀರು ಬರೋದೇನು ಬೇಡ ಸಾರು, ನಾ ಫೋಟೊ ವಾಟ್ಸಪ್ಸ್‌ಲೊ ಪಂಪಿಸ್ತಾನು, ನಾಟಕದ ಡೇಟು ಚೆಪ್ಪಂಡಿ ಚಾಲು. ಡಯಲಾಗ್ ರಾಸಿ ಪಂಪಿಂಚಂಡಿ... ಮೂರು ದಿನ ಮೊದಲು ರಿಹರ್ಸಲಿಕಿ ವಸ್ತಾನು ಅಂತ